4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈ॥ ಮಾಡಿ ಇರುವವರು ಬದ್ಧರಾಗಿ ಇರುವವಲ್ಲವೆ; ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನೇ ಆಗಲಿ ನಿರಾಕರಿಸಬಹುದು.

5. ಕಂಟ್ರಾಕ್ಟು ಮೊಬಲಗಿನ ಪೈಕಿ 1 ತಿಂಗಳ ಮೊಬಲಗನ್ನು ಅಮಾನತ್ತು ಇಡಬೇಕು.

6. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಮೊಬಲಗನ್ನು ಪ್ರತಿ ತಿಂಗಳು 5ನೆ ತಾರೀಖು ವಳಗಾಗಿ ಮುಂದಾಗಿಯೇ ಪಾವತಿ ಮಾಡಿ ರಸೀತಿ ಪಡಿಯುತ್ತಾ ಬರಬೇಕು. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಕೆಲಸವನ್ನು ಸರಿಯಾಗಿ ನೆರವೇರಿಸುವ ಬಗ್ಗೆ ಆತನ ಕಂಟ್ರಾಕ್ಟು ಮಂಜೂರಾವ 7 ದಿವಸದ ವಳಗಾಗಿ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಬರದುಕೊಡಬೇಕು.

7. ತೇವಣಿ ಹಣವು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಅಬೈರಾಗ್ಯವರಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅಮಾನತ್ತು ವುಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರೆಸಿಡೆಂಟ್ ಸಾಹೇಬರು ಇವನಿಗೆ ವಿಧಿಸುವ ಜುಲ್ಮಾನೆಗಳನ್ನು ಇವನು ಅಲಾಯಿದಾ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರಿ ತೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ತೇವಣಿ ಭರ್ತಿ ಬಗ್ಗೆ ಕಂಟ್ರಾಕ್ಟುದಾರನಿಗೆ ನೋಟಿಸು ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ತೇವಣಿ ಹಣ ವಾಪಸು ಮಾಡಲ್ಪಡುವದು.

8. ಕಡೆಮೆ ವಿಷಯಗಳನ್ನು ಈ ಕೆಳಗೆ ಸೈ॥ ಮಾಡಿರುವವರ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

9. ಸರ್ಕಾರಿ ಉಪಯೋಗಕ್ಕೋಸ್ಕರವಾಗಿ ಈ ಸ್ಥಳ ಬೇಕಾದಲ್ಲಿ ಬೇರೆ ಸ್ಥಳ ನೇಮಿಸಲ್ಪಡುತ್ತದಾಗಿ ಆಗ ಯಾವ ಕರ್ಪೇಸರ್ ಅಪೇಕ್ಷಿಸದೆ ಕಂಟ್ರಾಕ್ಟು ಪ್ರಕಾರ ನಡದುಕೊಳ್ಳಬೇಕಾಗಿರುತ್ತೆ.

10. ಕಂಟ್ರಾಕ್ಟು ಹದ್ದಿನ ಸ್ಥಳಕ್ಕೆ ಭಂಡಿ ಬಾರದೆ ಇದ್ದಲ್ಲಿ ಇದಕ್ಕಾಗಿ ಯಾವ ಲುಕ್ಸಾನು ದೊರಿಯಲಾರದು.

11. ಪ್ರೆಸಿಡೆಂಟ್ ಸಾಹೇಬರವರ ಮಂಜೂರಿ ಇಲ್ಲದೆ ಬಾಬು ಇತರರಿಗೆ ಷಿಕ್ಕಿ ಕಂಟ್ರಾಕ್ಟು ವಗೈರೆ ಕೊಡಕೂಡದು ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗೈರೆಗಳನ್ನು ಬೇ ತಕರಾರು ತೆಗದುಕೊಳ್ಳಲು ಸಲೀಸು ಏರ್ಪಾಡು ಇಡತಕ್ಕದ್ದು.

12. ಇವುಗಳ ಪೈಕಿ ಯಾವ ಷರತ್ತಿಗಾಗಲಿ ತಪ್ಪಿಸಿಕೊಂಡರೆ ತಕ್ಷಣ ಕಂಟ್ರಾಕ್ಟನ್ನು ಬೇರೆ ಜನರಿಗೆ ಕೊಟ್ಟು ಲುಕ್ಸಾನು ಮೊಬಲಗಿಗೆ ಕಂಟ್ರಾಕ್ಟುದಾರನನ್ನು ಗುರಿಮಾಡುವದಲ್ಲದೆ ತೇವಣಿ ಮೊಬಲಗು ದಂಡವಾಗಿ ತೆಗೆದುಕೊಳ್ಳಲ್ಪಡುತ್ತೆ.

ಹೆಚ್. ಹಚ್. ಸ್ಪಾರ್ಕ್ಸ್,
ಪ್ರೆಸಿಡೆಂಟ್.

ಇನ್ವಿಟೇಶನ್ ಹಾರ್.

ತಾರೀಖು. ನೇ ಮೇ 1907.

ಇದರಿಂದ ಸರ್ವಸ್ಥ ಜನಗಳಿಗೂ ತಿಳಿಯಪಡಿಸುವದೇನಂದರೆ :—ಗೌರ್ನಮೆಂಟಿನಿಂದ ಸಾದರಾದ 29—6—1901ನೆ ಮುರ್ಸಂ 17691—L. B. (P) 633ನೆ ನಂಬರ್ ಪ್ರೊಸೀಡಿಂಗ್ಸ್ ಅನುಸರಿಸಿ ಇದರ ಮುದ್ದಿನ್ನಲ್ಲಿ ತೋರಿಸಿರುವ ಬೆಂಗಳೂರು ಸಿಟಿ ಬಸವನಗುಡಿ ಮತ್ತು ಮುಲ್ಲೇಶ್ವರ ಎಕ್ಸ್‌ಟೆರ್ಷಗೆ ಸೇರಿದ ಕಟ್ಟಡ ಕಟ್ಟತಕ್ಕ ಸೈಟುಗಳನ್ನ 1907ನೆ ಇಸವಿ ಜೂ॥ ತಾ॥ ರಲ್ಲು

	ಬಸವನಗುಡಿ ಎಕ್ಸ್‌ಟೆರ್ಷ.	ಅಳತೆ.	ಹರಾಜು ತಾರೀಖು.
2ನೆ ಬ್ಲಾಕ್	.... 260—261—262—263 & 264	...110 × 30	4—6—07
4ನೆ ಬ್ಲಾಕ್	... 27—28—84	...100 × 30	
5ನೆ ಬ್ಲಾಕ್	... 26—35	...100 × 30	
	ಮುಲ್ಲೇಶ್ವರ ಎಕ್ಸ್‌ಟೆರ್ಷ.		
ಬೆಗೆಹಾಸ್ ಸೈಟ್	... 25 ..	.. 157 × 215	5—6—07
	26 ..	.. 137 × 215	
	35 & 36 ..	... 153 × 215	
6ನೆ ಕ್ರಾಸ್ ರೋಡ್	.. 49—50 ...	... 100 × 30	
7ನೆ ಡಟೋ	.... 506 & 507 ...	... 70 × 30	

ಹರಾಜು ಮೂಲಕ ವಿಕ್ರಯಿಸತಕ್ಕದ್ದೆಂತ ನಿಶ್ಚಯಿಸಿ ಇರುತ್ತಾಗಿ ಹಾಜೀನಲ್ಲಿ ಛಡಿ ಸವಾಲ್ ಮೂಲಕ ಪಡದುಕೊಳ್ಳಲು ಇಷ್ಟವುಳ್ಳವರು ಅದೇ ತಾರೀಖು ಪ್ರಾತಃಕಾಲ 7½ ಘಂಟೆ ಲಾಗಾಯಿತು ಆಯಾಯ ಸೈಟುಗಳ ಬಳಿ ಹಾಜರಿದ್ದು ಛಡಿ ಸವಾಲ್ ಮೂಲಕ ಈ ಕೆಳಗೆ ಕಂಡ ಷರತ್ತುಗಳಿಗೆ ವಳಪಟ್ಟು ಛಡಿಸವಾಲ್‌ನಲ್ಲಿ ಪಡದುಕೊಳ್ಳಬಹುದಾಗಿರುತ್ತೆ. ಆ ದಿವಸ ಹರಾಜು ಪೂರ್ಣವಾದೆ ನಿಲ್ಲುವ ಸೈಟುಗಳನ್ನು ಮೂರು ದಿವಸಗಳಲ್ಲಿ ಅದೇ ಟೈಂನಲ್ಲಿ ಹರಾಜು ಮಾಡಿಸಲ್ಪಡುತ್ತೆ.

1. ಹರಾಜು ಖೈದಾದ ಕೂಡ್ಲೆ ಛಡಿ ಸವಾಲ್ ಮೊಬಲಗಿನಲ್ಲಿ ತೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ತೇವಣಿ ಇಡಬೇಕು. ಹಾಗಿಡದೆ ತಪ್ಪಿದರೆ ಕೂಡ್ಲೆ ದುಸರಾ ಹರಾಜು ಮಾಡಿಸಿ ಬರುವ ಲುಕ್ಸಾನಿಗೆ ಮೊದಲು ಛಡಿಸವಾಲ್‌ದಾರನ್ನ ಗುರಿಮಾಡಲ್ಪಡುತ್ತೆ.

2. ಹರಾಜು ತಾರೀಖು ಲಾಗಾಯಿತು 15 ದಿವಸದೊಳಗಾಗಿ ಬಾಕಿ ನಿಲ್ಲುವ ಮೊಬಲಗೆಂದರೆ ಛಡಿಸವಾಲ್ ಮೊಬಲಗೆ ಭರ್ತಿಯಾಗಿ ಕೊಡತಕ್ಕ ತೇಕಡಾ 75 ರೂಪಾಯಿನಂತೆ ಆಗುವ ಮೊಬಲಗನ್ನ ಛಡಿಸವಾಲ್‌ದಾರ ಹಾಜರಿಪಡಿಸಿ ರಸೀತಿ ಪಡಿಯಬೇಕು. ಇದಕ್ಕೆ ತಪ್ಪಿದರೆ ತೇವಣಿ ಮೊಬಲಗನ್ನ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳುವದಲ್ಲದೆ ಪುನಃ ಅಂಥಾ ಸೈಟನ್ನ ದುಸರಾ ಹರಾಜಿಗೆ ಇಡುವಾಗಿ ಬರುವ ನಷ್ಟಕ್ಕೆ ಮೊದಲು ಛಡಿಸವಾಲ್‌ದಾರನ್ನ ಗುರಿಮಾಡಲ್ಪಡುತ್ತೆ.

3. ಹರಾಜು ಮಂಜೂರಾದ ಕೂಡ್ಲೆ ಸೈಟನ್ನು ಛಡಿಸವಾಲ್ದಾರನು ಸ್ವಾಧೀನಪಡಿಸಿಕೊಳ್ಳಬೇಕು.

4. ಕೊಟ್ಟ ತಾರೀಖಿನಾರಭ್ಯ 30 ದಿವಸದೊಳಗಾಗಿ ಕಟ್ಟಡದ ಕೆಲಸವನ್ನು ಪುರೂ ಮಾಡತಕ್ಕದ್ದು; ಮತ್ತು 6 ತಿಂಗಳೊಳಗಾಗಿ ಕಟ್ಟಡವನ್ನು ಪೂರೈಸತಕ್ಕದ್ದು.

5. 50 ಅಡಿ ಲಾಂಬಿಗೆ ಕಡಿಮೆ ಇಲ್ಲದಷ್ಟು ಜಾಗವನ್ನು ಮೇಲ್ ಚಾವಣಿ ಇಲ್ಲದೆ ಅಂಗಳಕ್ಕಾಗಿ ಅಥವಾ ಗಾಳಿ ಬರತಕ್ಕದ್ದಕ್ಕಾಗಿ ಯಾವಾಗಲೂ ಬಿಟ್ಟಿರಬೇಕು. ಸದರೀ ಸ್ಥಳದಲ್ಲಿ ಹಂಗಾಮಿ, ಯಾ ಖಾಯಂ ಕಟ್ಟಡ ಯಾವದನ್ನೂ ಕಟ್ಟಕೂಡದು.

6. ಕಟ್ಟಡದ ಪ್ಲಿಂತ್ ವಗೈರೆ ಸ್ಯಾನಿಟೆರಿ ಇಂಜನಿಯರವರಿಂದ ಮಂಜೂರಾಗುವ ವರಿಗೂ ಯಾವಕಟ್ಟಡವನ್ನೂ ಪ್ರಾರಂಭಿಸಕೂಡದು. ಮಾಳಿಗೆ ಮನೆಯನ್ನು ಕಟ್ಟಲೇಕೂಡದು. ಕಟ್ಟಡಗಳೆಲ್ಲಾ ಹಂಚಿನದಾಗಿಯಾಗಲಿ ಅಥವಾ ತಾರಕೀದಾಗಲಿ ಇರತಕ್ಕದ್ದು.

7. ನೆಲ ಮತ್ತು ಹಿತ್ತಲು ಮಟ್ಟವು ರೋಜೀನಾ ಪಾಕೀಜಾ ಬಗ್ಯೆ ಕಕ್ಕಸ ಕಟ್ಟತಕ್ಕ ಸ್ಥಳವು ಮತ್ತು ಮನೆ ಬಚ್ಚಲು ನೀರು ಹೋಗುವದಕ್ಕೆ ಕಟ್ಟುತಕ್ಕ ಮೊಹರಿ ತರಪೆ ಮತ್ತು ಜಾಗ ಸಹ ಸ್ಯಾನಿಟೆರಿ ಇಂಜನಿಯರವರು ಅಪ್ಪಣೆ ಮಾಡಲು ರೀತಿಯಲ್ಲಿರತಕ್ಕದ್ದು.

8. ಬಂದು ಮತ್ತ ಪಣ ಅಥವಾ ಜಾತಿಯವರಿಗೆ ಏರ್ಪಡಿಸಿರುವ ಬೀದಿಯಲ್ಲಿನ ಮನೆಯಲ್ಲಿ ಸದರೀ ಬೀದಿಯ ಸಮಸ್ತ ಜನಗಳ ಬರಹ ಮೂಲಕವಾದ ಒಪ್ಪತ್ತರ ಮೇಲೆ ಡಿಪ್ಯುಟಿ ಕಮಿಷರ್ಪರವರು ಮಂಜೂರ್ಮಾಡಿದ ಹೊರ್ತು ಇತರ ಮತ್ತ ಪಣ ಯಾ ಜಾತಿಯವರು ವಾಸ ಮಾಡಕೂಡದು.

9. ಕಟ್ಟಡಕ್ಕಾಗಿ ಕೊಟ್ಟಿರುವ ನಿವೇಶನಗಳಲ್ಲಿ ಹಳ್ಳ ತೆಗಿಯಲುಕೂಡದು. ಕಟ್ಟಡಕ್ಕೋಸ್ಕರವಾಗಿ ಯಾ ನೆಲ ಮಟ್ಟವನ್ನು ಯಾತ್ರಸುವದಕ್ಕಾಗಲಿ ಬೇಕಾಗುವ ಮಣ್ಣನ್ನು ಸ್ಯಾನಿಟೆರಿ ಇಂಜನಿಯರವರ ಅಪ್ಪಣೆ ಪ್ರಕಾರ ತೋಡಿಸಲ್ಪಡುವ ಜಾಗಾವಲ್ಲಿ ತೆಗೆದುಕೊಳ್ಳತಕ್ಕದ್ದು.

10. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರು ತಪ್ಪು ನಡದಲ್ಲಿ ಕೊಡಲ್ಪಟ್ಟಿರುವ ನಿವೇಶನವನ್ನು ಹಿಡುವೇದಾರನು ಮತ್ಯಾವ ವಿಚಾರಣೆಯೂ ಇಲ್ಲದೆ ಹೋಗಲುಡಿಸಿಕೊಳ್ಳುವದಕ್ಕೆ ಗುರಿಯಾಗುವನು.

11. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ತಪ್ಪು ನಡೆದದ್ದಕ್ಕೋಸ್ಕರ ನಿವೇಶನವನ್ನು ಸರ್ಕಾರಕ್ಕೆ ಕೇರಿಸಿಕೊಂಡ ಬಳಿಕ ಹಿಡುವಳೀದಾರನಾಗಲಿ ಅಥವಾ ಅವನಿಂದ ಪಡದುಕೊಂಡವರಾಗಲಿ ಯಾವ ವಿಧವಾದ ಪರಿಹಾರ ದ್ರವ್ಯಕ್ಕಾ ಯಾ ಸದರೀ ನಿವೇಶನದ ಮೇಲೆ ಖರ್ಚು ಮಾಡಿರುವ ಲಾಗವಡಿಗೂ ಹಕ್ಕು ದಾರ್ಯಾಗುವದಿಲ್ಲ.

ಎಂ. ಜಿ. ಕೃಷ್ಣಸ್ವಾಮಿರಾವ್,
ವೈಸ್ ಪ್ರೆಸಿಡೆಂಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟ್‌ನಲ್ಲಿ.

ತಾರೀಖು 6ನೆ ಮೇ-1907.

1906—07ನೆ ಇಸವಿ ಸಿವಿಲ್ ಸೂಟ್ ನಂಬರು 6.

1906—07ನೆ ಇಸವಿ ಮಿಸಲೇನಿಯಸ್ ನಂಬರು 347.

ವಾದೀರು.

ಮೈಸೂರು ದೇವರಾಜಮೊಹಲ್ಲಾದಲ್ಲಿರುವವರು.

1. ಉಪ್ಪಿನ ಮಂಡಿ ಸಾಹುಕಾರ ಇಬ್ರಾಹಿಂಸೇಟು
2. ಡಿಟೋ ವ್ಯಾಪಾರದ ಅಬ್ದುಲ್‌ಗನಿ ಸೇಟು
3. ಜಿನಸಿ ವ್ಯಾಪಾರದ ಸಾಹುಕಾರ್ ಅಬ್ದುಲ್ ರಹಿಮ್ಮತ್‌ಸೇಟು
4. ಮುನಿಸಿಪಲ್ ಕಮಿಷನರ್ ಸಾಹುಕಾರ್ ರಹಿಮತ್ತುಲ್ಲಾ ಸೇಟು
5. ಪಾತ್ರ ಅಂಗಡಿ ಕಂಟ್ರಾಕ್ಟರ್ ದಾವೂದ್‌ಖಾ ಸಾಹೇಬರು
6. ದಳ್ಳಾಳಿ ಮಗ ಮಹಮದ್‌ಸಾಬಿ
7. ಜಿನಸಿ ಪೈರುದಾರ್ರು ಮಹಮ್ಮದಖಾಶೀಂಸಾಬ್
8. ಖಾಶಿಂಸಾಬರ ಮಗ ಕಂಟ್ರಾಕ್ಟರ್ ಮಹಮ್ಮದ್ ಸಾಹೇಬ್

ಪ್ರತಿವಾದಿ,

ಸದರಿ ದೇವರಾಜ ಮೊಹಲ್ಲಾ ಸಂತೇಪೇಟೆಯಲ್ಲಿರುವ ಅಬ್ದುಲ್ ರಜಾಕ್ ಅಲ್ಲೀಖಾನ್‌ಮೆಕ್ಕಿಯವರ ಮಗ ಮಹಮ್ಮದಲ್ಲೀಖಾನ್ ಮೇಕ್ಕಿ.

ಮೈಸೂರಲ್ಲಿರುವ ಎಲ್ಲಾ ಮಹಮ್ಮದೀಯ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರು ಶ್ರೀರಾಂಪೇಟೆಯಲ್ಲಿರುವ ಮಹಮ್ಮದೀಯರ ಮಸೀತಿಗೆ ತಾನು ಮುತ್ತವಲ್ಲಿಯೆಂದು ಹೇಳಿಕೊಂಡು ಹಾಲಿ ಮುತ್ತವಲ್ಲಿ ಕೆಲಸ ನೋಡುತ್ತಾ ಇರುವ ಪ್ರತಿವಾದಿ ಮಹಮ್ಮದಲ್ಲಿಖಾನ್ ಮೇಕ್ಕಿಯವರು ಮುತ್ತವಲ್ಲಿ ಕೆಲಸಕ್ಕೆ ಅರ್ಹರಲ್ಲವೆಂದೂನ್ನೂ, ಈತ ಮುಂದೆ ಮುತ್ತವಲ್ಲಿ ಕೆಲಸ ನೋಡಕೂಡವೆಂದೂನ್ನೂ, ಡಿಕ್ಲೇರ್ ಮಾಡಿ ಕಂಟ್ರಾಕ್ಟರ್ ಮಹಮ್ಮದ್ ಇಬ್ರಾಹಿಂ ಸಾಹೇಬರನ್ನಾಗಲಿ, ಅಥವಾ ಲಾಯಖ್ಖಾದ ಬ್ಯಾರೆ ಹನ್ಯಾರಾದರು ಒಬ್ಬರನ್ನು, ಮುತ್ತವಲ್ಲಿ ಕೆಲಸಕ್ಕೆ ನೇಮಕ ಮಾಡಿ ಸದರಿ ಮಸೀತಿ ಕೆಲಸಗಳು ಮುಂದೆ ನಡಿಯುವದಕ್ಕೆ ಬಂದು ಕ್ರಮವಾದ ಏರ್ಪಾಡನ್ನ ಕೋರ್ಟಿನವರು ಮಾಡಿಕೊಡಬೇಕೆಂಬದಾಗಿ ವಗೈರೆ ಮೇಲೆಕಂಡ ವಾದೀರು ತಮಗೋಸ್ಕರವಾಗಿಯೂ ಇತರ ಮಹಮ್ಮದೀಯ ಜನಗಳಿಗೋಸ್ಕರವಾಗಿಯು ಎಂದು ಸಿವಿಲ್ ಪ್ರೊಸೀಜ್ಯೂರ್‌ಕೋಡು 30ನೆ ಸೆಕ್ಷನ್ ಪ್ರಕಾರ ಅಪ್ಪಣೆ ಪಡದು ದಾಖಲ ಮಾಡಿದ ದಾವಾ 1907ನೆ ಇಸವಿ ಜೂನ್ ಮಾಹೆ 1ನೆ ತಾರೀಖಿಗೆ ಹಿಯರಂಗು ಇರುತ್ತೆ.

ಸದರಿ ಮಸೀತಿಗೆ ಅಭಿಮಾನಶಾಲಿಗಳಾದ ಮಹಮ್ಮದೀಯರಸಮೂಹಕ್ಕಾಗಿ ಮೇಲ್ಕಂಡ ವಾದೀರು ಮುಂದಿನ ಕ್ರಮ ನಡಿಸುವ ಭಾಗದಲ್ಲಿ ಅಭ್ಯಂತರವೇನಾದರೂ ಇದ್ದಲ್ಲಿ ಆಂಥಾವರು ಮೇಲೆ ಕಂಡ ಹೀರಂಗು ತಾರೀಖಿನ ದಿವಿ 11 ಘಂಟೆಗೆ ಖುದ್ದಾಗಿ ಆಗಲಿ, ಅಥವಾ ಅಧಿಕಾರ ಹೊಂದಿದ ವಕೀಲರ ಮೂಲಕವಾಗಿ ಆಗಲಿ ಈ ಕೋರ್ಟಿನ ರೂಬರೂಬು ಹಾಜರಾಗಿ ಲಿಖಿತ ಮೂಲಕ ಕೋರ್ಟಿಗೆ ತಿಳಿಯಪಡಿಸಿಕೊಳ್ಳತಕ್ಕದ್ದಿದೆ.

ಎಸ್. ವೆಂಕಟವರದಪ್ಪಯ್ಯಂಗಾರ್,
ಡಿಸ್ಟ್ರಿಕ್ಟ್ ಜಡ್ಜ್.